ಅ) ಯಾವಾಗ ಕಾರ್ಯರೂಪಕ್ಕೆ ತರಲಾಗುವುದು?

ಶ್ರೀ ಕೆ.ಹೆಚ್. ರಂಗನಾಥ್(ಅರಣ್ಯ,ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ಕ್ಷಿತಿಜ ನೇಸರಧಾಮಕ್ಕೆ ರಾಷ್ಟ್ರೀಯ ಹೆದ್ದಾರಿ 17ರಿಂದ ಒಟ್ಟು 2.1 ಕಿ.ಮೀ ಉದ್ದವಿದ್ದು, ಅದರಲ್ಲಿ 0.750 ಕಿ.ಮೀ. ಉದ್ದಕ್ಕೆ ಡಾಂಬರೀಕರಣ ಮಾಡಲಾಗಿದೆ. ಈ ಕೆಲಸವನ್ನು ಲಭ್ಯವಿರುವ ಸಂಸತ್ ಸದಸ್ಯರ ನಿಧಿಯಿಂದ ನಿರ್ವಹಿಸಲಾಗಿದೆ.

ಆ) ಇತರೆ ಯಾವುದಾದರೂ ಅನುದಾನ ಬಂದಲ್ಲಿ ಉಳಿದ, ಡಾಂಬರೀಕರಣ ಕೆಲಸವನ್ನು ಪೂರ್ಣಗೊಳಿಸಲಾಗುವುದು.

ಹಿರಿಯೂರಿನಲ್ಲಿ ಆರ್.ಕೆ. ಪವರ್‌ಜನ್ ಕಂಪನಿ ಕುರಿತು

1220(1945) ಶ್ರೀ ಗುರುಸ್ವಾಮಿ ಎ.ಎಸ್(ಚಾಮುಂಡೇಶ್ವರಿ) : ಮಾನ್ಯ ಅರಣ್ಯ,ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಚಿತ್ರದುರ್ಗ ಜಿಲ್ಲೆಯ ಹಿರಿಯೂರಿನಲ್ಲಿ ಆರ್.ಕೆ.ಪವರ್ ಜನ್ ಕಂಪನಿಯು ಉರುವಲು ವಿದ್ಯುತ್ತ ಕೇಂದ್ರ ಸ್ಥಾಪಿಸಲು ಮುಂದೆ ಬಂದಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?

2) ಹಾಗಿದ್ದಲ್ಲಿ, ಸದರಿ ಪವರ್ ಕಂಪನಿಯು ಕಾರ್ಯ ಪ್ರಾರಂಭಿಸುವ ಮೊದಲು ಪರಿಸರ ಇಲಾಖೆಯಿಂದ ಎನ್.ಒ.ಸಿಯನ್ನು ಪಡೆದುಕೊಂಡಿದೆಯೆ? ಹಾಗೂ ಪರಿಸರ ಇಲಾಖೆಯವರು ಅನುಮೋದಿಸಿದ ರೀತ್ಯ ಕಂಪನಿಯು ಸ್ಥಾಪಿತವಾಗಿರುತ್ತದೆಯೇ?

3) ಈ ಪವರ್ ಕಂಪನಿಯು ಪರಿಸರ ಕಾನೂನುಗಳನ್ನೇನಾದರೂ ಉಲ್ಲಂಘಿಸಿದೆಯೇ?

4) ಹಾಗಿದ್ದಲ್ಲಿ, ಸರಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಕೆ.ಹೆಚ್.ರಂಗನಾಥ್(ಅರಣ್ಯ,ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

1) ಹೌದು

2) ಹೌದು

3) ಇಲ್ಲ

4) ಉದ್ಭವಿಸುವುದಿಲ್ಲ

ಮೈಸೂರಿನಲ್ಲಿ ಪರಿಸರ ಸಂಪನ್ಮೂಲ ಕಾರ್ಯಕ್ರಮಗಳ ಅನುಷ್ಠಾನ

1221(1946) ಶ್ರೀ ಗುರುಸ್ವಾಮಿ ಎ.ಎಸ್.(ಚಾಮುಂಡೇಶ್ವರಿ) : ಮಾನ್ಯ ಅರಣ್ಯ,ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ತಾ 11.10.1999ರಿಂದ ಈವರೆವಿಗೆ ವಿವಿಧ ಪರಿಸರ ಸಂಬಂಧ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಅಂತರರಾಷ್ಟ್ರೀಯ ಸಂಸ್ಥೆಗಳಿಂದ ಬಂದಿರುವ ಸಹಾಯ ಧನ ಎಷ್ಟು?

2) ಇದರಲ್ಲಿ ಯಂತ್ರ ಸಾಮಗ್ರಿಗಳ ರೂಪ ಎಷ್ಟು? ಹಣದ ರೂಪದಲ್ಲಿ ಎಷ್ಟು;ಎಲ್ಲವನ್ನೂ ಇಲಾಖೆ ಉಪಯೋಗಿಸಿಕೊಂಡಿದೆಯೆ;

3) ಮೈಸೂರಿನ ಪರಿಸರ ಇಲಾಖೆಯ ಗೋಡೌನ್‌ನಲ್ಲಿ ಹೊರ ದೇಶಗಳಿಂದ ಬಂದಿರುವ ಯಾಂತ್ರಿಕ ಸಾಮಗ್ರಿ ಉಪಯೋಗ ಇಲ್ಲದೆ ಇಟ್ಟಿರುವುದು ಗಮನಕ್ಕೆ ಬಂದಿದೆಯೆ; ಬಂದಿದ್ದರೆ, ಇದನ್ನು ಬಳಕೆಗೆ ತೊಡಗಿಸಲು ಕೈಗೊಂಡಿರುವ ಕ್ರಮ ಏನು?

4) ನೀರು, ಗಾಳಿ ಮತ್ತು ಶಬ್ದ ಮಾಲಿನ್ಯ ತಡೆಗೆ ಇರುವ ಕಾನೂನನ್ನು ಜಾರಿಗೆ ತರುವ ಕಾರ್ಯಕ್ರಮವನ್ನು ಖಾಸಗೀಕರಣಗೊಳಿಸಲು ಸರ್ಕಾರ ಬಯಸಿದೆಯೆ?

5) ಹೌದಾದರೆ ಇದನ್ನು ಯಾವಾಗ ಜಾರಿಗೊಳಿಸಲಾಗುವುದು?

ಶ್ರೀ ಕೆ.ಹೆಚ್.ರಂಗನಾಥ್(ಅರಣ್ಯ,ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

1) 3357.03 ಲಕ್ಷ ರೂಗಳು ಸ್ವೀಕೃತವಾಗಿರುತ್ತದೆ.

2) 3325.60 ಲಕ್ಷರೂಗಳು ಮಾತ್ರ ಪ್ರಯೋಗಾಲಯದ ಉಪಕರಣಗಳನ್ನು ಮೆ RITES ಸಂಸ್ಥೆಯಿಂದ ನೇರವಾಗಿ ಸ್ವೀಕರಿಸಲಾಗಿದೆ. ನಗದು ರೂಪದಲ್ಲಿ 1535.72 ಲಕ್ಷ ರೂಗಳನ್ನು ಸ್ವೀಕರಿಸಲಾಗಿದೆ. ಪೂರ್ತಿ ಅನುದಾನವನ್ನು ಬಳಸಿಕೊಳ್ಳಲಾಗಿದೆ.

3) ಎಲ್ಲಾ ಉಪಕರಣಗಳನ್ನು ಮೈಸೂರಿನಲ್ಲಿರುವ ಮಂಡಳಿಯ ಪ್ರಾದೇಶಿಕ ಪ್ರಯೋಗಾಲಯದಲ್ಲಿ ಅಳವಡಿಸಿ ಈಗ ಎಲ್ಲಾ ಉಪಕರಣಗಳನ್ನು ಉಪಯೋಗಿಸಲ್ಪಡುತ್ತಿದೆ.

4) ಇಲ್ಲ

5) ಅನ್ವಯಿಸುವುದಿಲ್ಲ.

ಹುಬ್ಬಳ್ಳಿ-ಧಾರವಾಡ ನಗರದ ಮಧ್ಯೆ ರಸ್ತೆಯನ್ನು ನಾಲ್ಕು ಪಥದ ರಸ್ತೆಯನ್ನಾಗಿ ಪ್ರಾರಂಭಿಸುವುದು

1223(734) ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಬ್ಬಳ್ಳಿ-ಧಾರವಾಡ ನಗರ ಮಧ್ಯದ ರಸ್ತೆ 4ವೇ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಆ) ಫೋರ್ ವೇ ಸೂಪರ್ ಫಾಸ್ಟ್ ರಸ್ತೆ ನಿರ್ಮಿಸುವ ಕಾರ್ಯ ಕೈಗೆತ್ತಿಕೊಳ್ಳಲಾಗಿದೆಯೇ;ಇದಕ್ಕಾಗಿ ತಗಲುವ ಅಂದಾಜು ವೆಚ್ಚವೆಷ್ಟು?

ಇ) ಇಲ್ಲವಾದಲ್ಲಿ, ಕಾರಣವೇನು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ಈ ರಸ್ತೆಯ ಅಗಲೀಕರಣದ ಪ್ರಸ್ತಾವನೆ ಇದೆ.

ಆ) ಈ ಕಾಮಗಾರಿಯನ್ನು ಇನ್ನೂ ಕೈಗೆತ್ತಿಕೊಳ್ಳಲಾಗಿಲ್ಲ. ಇದಕ್ಕೆ ತಗಲಬಹುದಾದ ವೆಚ್ಚ ರೂ. 27.50 ಕೋಟಿಗಳು.

ಇ) ಸಮಗ್ರ ಪರಿಶೀಲನೆ ಮಾಡಬೇಕಾಗಿದೆ.

ರಾಜ್ಯದಲ್ಲಿ ಅರಣ್ಯ ಜಮೀನಿನ ಅಕ್ರಮ-ಸಕ್ರಮ

1224(1433) ಶ್ರೀ ಜಗದೀಶ್ ಶೆಟ್ಟರ್(ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಅರಣ್ಯ,ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಅರಣ್ಯವನ್ನು ಒತ್ತುವರಿ ಮಾಡಿ ಕೃಷಿ ಮಾಡುತ್ತಿರುವ ಜಮೀನಿನ ವಿಸ್ತೀರ್ಣವೆಷ್ಟು? (ಜಿಲ್ಲಾವಾರು ವಿವರ ನೀಡುವುದು);

ಆ) ಒತ್ತುವರಿ ಮಾಡಿಕೊಂಡಿರುವವರಿಗೆ ಈ ಜಮೀನುಗಳನ್ನು ಸಕ್ರಮಗೊಳಿಸಲಾಗುವುದೇ?

ಇ)) ಈವರೆಗೆ ಎಷ್ಟು ಜನರಿಗೆ ಈ ಅರಣ್ಯ ಭೂಮಿಯನ್ನು ಸಕ್ರಮಗೊಳಿಸಲಾಗಿದೆ; (ಜಿಲ್ಲಾವಾರು ವಿವರ ನೀಡುವುದು);

ಈ) ಒತ್ತುವರಿ ಮಾಡಿಕೊಂಡವರಿಗೆ ಜಮೀನು ಸಕ್ರಮೀಕರಣಗೊಳಿಸಲು ಕೈಗೊಂಡಿರುವ ಕ್ರಮಗಳೇನು?